(c) The scheme was sanctioned by Government on 30th November 1971. Due to increase in the price of materials, the estimate of the building had to be revised three times and approval of the Public Works Department had to be obtained. Hence, the delay.

(d) The building is expected to be completed before the end of 1976.

SRI B. G. BANAKAR —May I know the facilities that are given through the Guru Bhavan ?

† SRI M. MALLIKARJUNASWAMY —We are giving the facilities pertaining to educational, recreation, cultural, social and other activities ?

SRI B. G. BANAKAR —May I know the amount of plans and estimates ?

SRI M. MALLIKARJUNASWAMY.—Rs. 6 lakhs.

ಶ್ರೀ ಬಿ. ಜಿ. ಬಣಕಾರ್.—ಅಕ್ಟೋಬರ್‌ನೇ ಇಸವಿಗಿಂತ ಮುನ್ನವೇ ಇದನ್ನು ಮುಂಗಿಸುತ್ತೇವೆಂದು ಹೇಳಿದ್ದು ಈಗ ೬ ತಿಂಗಳು ಮುಂದಕ್ಕೆ ಬಾದರೂ ಕೂಡ ಇನ್ನು ಮುಗಿದಿಲ್ಲ. ನೀವು ಹೇಳಿದಹಾಗೆ ಅದನ್ನು ಕನಿಷ್ಟ ಅಕ್ಟೋಬರ್‌ನೇ ಇಸವಿಯ ಅಂತ್ಯದಲ್ಲಿಯಾದರೂ ಮುಗಿಸಲೇಬೇಕು. ಅದಕ್ಕೆ ಏನಾದರೂ ಆದೇಶ ಕೊಟ್ಟು ಆಷ್ಟರೊಳಗೆ ಇದನ್ನು ಮುಗಿಸಲೇಬೇಕು ಎಂದು ಆದೇಶಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆಗಲೇ ಕಟ್ಟಡ ರೂಫ್ ಲೆವೆಲ್ ಆಗಿದೆ. ಈ ವರ್ಷದ ಅಂತ್ಯದಲ್ಲಿ ಮುಗಿಯುತ್ತದೆ. ಜೊತೆಗೆ ಆದೇಶವನ್ನು ಕೊಡುತ್ತೇನೆ.

ಗದಗ ಡಿಪೋವಿನಲ್ಲಿರುವ ಬಸ್ಸುಗಳು

೭೪೨. ಶ್ರೀ ವಿ. ವಿ. ವಾಯಿ (ಶಿರಹಟ್ಟಿ).—ಸಾರಿಗೆ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಗದಗ ಡಿಪೋವಿಂದ ಮತ್ತು ಗದಗ ಸ್ಟ್ಯಾಂಡಿನಿಂದ ಪ್ರತಿ ದಿನಾ ಪ್ರತಿಯೊಂದು ಬಸ್ಸು ಆಲ್ಲಿ ಕಾಸೆರಡು ತಾಸು ತಡವಾಗಿ ಬಿಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

(ಬ) ಗದಗ ಡಿಪೋದ ಕೆಟ್ಟ ಗಾಡಿಗಳು ಸರಿಯಾಗಿ ರಿಪೇರಿ ಮಾಡುವುದಿಲ್ಲವೆಂಬುದು ಸರಕಾರದವರ ಗಮನಕ್ಕೆ ಬಂದಿದೆಯು ;

(ಇ) ಗದಗ ಡಿಪೋದಲ್ಲಿ ಗಾಡಿಗಳನ್ನು ರಿಪೇರಿ ಸರಿಯಾಗಿ ಮಾಡಿರುವುದಿಲ್ಲವಲ್ಲದೇ ಅವುಗಳನ್ನು ಸ್ವಚ ಮಾಡಿರುವುದಿಲ್ಲವೆಂಬುದು ಸರಕಾರದ ಗಮನಕ್ಕೆ ಬಂದಿದೆಯೆ ;

ಶ್ರೀ ಎಂ. ಮಹಮದಾಲಿ (ಸಾರಿಗೆ ಹಾಗೂ ಪ್ರವಾಸೋದ್ಯಮ ಮಂತ್ರಿಗಳು). —

(ಅ) ಇಲ್ಲ.

(ಆ) ಇಲ್ಲ.

(ಇ) ಇಲ್ಲ.

ಶ್ರೀ ವಿ. ವಿ. ವಾಯಿ.— ನನ್ನ ಪ್ರಶ್ನೆಗಳಿಗೆ ಉತ್ತರದಲ್ಲಿ 'ಇಲ್ಲ'ವೆಂದ ಹೇಳಿದ್ದೀರಿ, ಆದರೆ ಅಲ್ಲಿ ನಡೆಯುತ್ತಿರತಕ್ಕಂಥ ವ್ಯವಹಾರ ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಎನ್ನುವುದು ಅರ್ಥವಾಗಲಿಲ್ಲ ಗದಗ್ ಡಿಪೋದಲ್ಲಿ ತಾಸ್ ಗಟ್ಟಲೆ ತಡವಾಗಿ ಬಸ್‌ಗಳು ಹೊರಡುತ್ತಿರತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿದೆಯೇ ?

SRI M MOHAMMED ALI — The question is whether every bus that departs from the Gadag bus station is late by one or two hours. The reply is 'no' But some of the buses are departing late.

ಶ್ರೀ ವಿ. ವಿ ವಾಯು.— ಗದಗ್ ಡಿಪೋಗಳಲ್ಲಿ ಗಾಡಿಗಳನ್ನು ಸರಿಯಾಗಿ ರಿಪೇರಿ ಮಾಡುತ್ತಿಲ್ಲ ಗಾಡಿಗಳು 15-20 ಮೈಲ ದೂರ ಹೋದ ಕೂಡಲೇ ನಿಂತುಕೊಂಡು ಬಿಡುತ್ತವೆ ಇದರಿಂದಾಗಿ ಪ್ಯಾಸೆಂಜರ್ಸ್‌ಗೆ ಬಹಳ ಅಸಾನುಕೂಲವಾಗುತ್ತಿದೆ ಇದನ್ನು ತಪ್ಪಿಸುವುದರ ಸಲುವಾಗಿ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

SRI M MOHAMMED ALI.— A good number of buses in Gadag depot have become due for reconditioning which results in heavy repairs and the Road Transport Corporation has been directed to see that all the buses are reconditioned as early as possible and the backlog is removed.

ಶ್ರೀ ಜೆ. ಎಲ್. ಕಬಾಡಿ.—ಹುಬ್ಬಳ್ಳಿ ಡಿವಿಜನ್‌ನಲ್ಲೂ ಕೂಡ ಎಷ್ಟೊಗಾಡಿಗಳನ್ನು ಸರಿಯಾಗಿ ರಿಪೇರಿ ಮಾಡಿ ಬಿಡುತ್ತಿಲ್ಲ ಅದೇ ರೀತಿಯಾಗಿ ಗದಗ್‌ನಲ್ಲೂ ಆಗಿರತಕ್ಕಂಥದ್ದು ಅದುದರಿಂದ ಅದರ ಬಗ್ಗೆ ತಾವು ಸರಿಯಾದ ವ್ಯವಸ್ಥೆಯನ್ನು ಮಾಡುತ್ತೀರಾ ಸ್ವಾಮಿ ?

SRI M. MOHAMMED ALI.—One-third of the fleet has become due for replacement and one-third is due for reconditioning This is resulting in heavy breakdowns and this year the Corporation has provided about Rs. 12 crores for replacement of the vehicles that have completed their life and a very comprehensive plan has been undertaken by the Corporation for reconditioning also and I hope within a year the Corporation will be able to get over all these difficulties of breakdowns.

ಶ್ರೀ ವಿ. ವಿ. ವಾಯು.— ಗಾಡಿಗಳು ಬಸ್ ಡಿಪೋಗಳಿಗೆ ಹೋದ ನಂತರ ಅಲ್ಲಿ ಗಾಡಿಗಳನ್ನು ಕ್ಲೀನ್ ಮಾಡುವುದಿಲ್ಲ ಗಾಡಿಗಳನ್ನು ತೊಳೆಯುವುದಿಲ್ಲ ಅದನ್ನು ಸ್ವಚ್ಛವಾಗಿ ಇಟ್ಟಿರುವುದಿಲ್ಲ. ಆದುದರಿಂದ ಅವುಗಳನ್ನು ಸ್ವಚ್ಛವಾಗಿ ಇಟ್ಟಿರುವಂತೆ ನೋಡಿಕೊಳ್ಳಲು ಸರಿಯಾದ ವ್ಯವಸ್ಥೆ ಮಾಡುತ್ತೀರಾ ಸ್ವಾಮಿ ?

SRI M MOHAMMED ALI — The question of uncleanliness is a common complaint and this is happening because in the entire question of operation of services cleaning is left to the small officers *i. e* Conductors and Drivers. Now officers of every depot and every division are expected to go and see that the operation start under their guidance and see that the buses are kept clean.

ಚಿಂತಾಮಣಿಯಲ್ಲಿನ ಏತ ನೀರಾವರಿ ಕಾಮಗಾರಿಗಳು

759. ಶ್ರೀ ಚೌದರೆಡ್ಡಿ (ಚಿಂತಾಮಣಿ).— ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

(ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಇರಾಖೆಯು ಉಪ ವಿಭಾಗದಿಂದ ಸಣ್ಣ ನೀರಾವರಿ ಏಷ್ಟು ಕೆಲಸಗಳನ್ನು ಮಾಡಲು ಅಂದಾಜು ತಯಾರಾಗಿ ಕಾರ್ಯಗತವಾಗಿದೆ. ಇನ್ನೆಷ್ಟು ಕಾರ್ಯಗತವಾಗದೆ ಉಳಿದಿದೆ ;